**ದಿನಾಂಕ - 11-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 1 ನೇ ಪ್ರತಿವಾದಿಯರ ಪರ ಶ್ರೀ ವಿ.ಎಸ್., ವಕೀಲರಿಂದಃ**

ವಾದಿ ನನ್ನ ಹೆಂಡತಿ. ಆಕೆ ಮುಂಬೈಯಲ್ಲಿ ವಾಸವಿದ್ದಾಳೆ. ಆಕೆಗೆ ಕಳೆದ 4-5 ವರ್ಷಗಳಿಂದ ಕಾಲು ನೋವು, ಸೊಂಟ ನೋವು ಇದೆ. ಚಿಕಿತ್ಸೆ ಕೊಡಿಸಿದ ಬಗ್ಗೆ ದಾಖಲೆ ಇದೆ, ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ವಾದಿ ಆರೋಗ್ಯದಲ್ಲಿ ಇದ್ದರೂ ನಾನೇ ಆಕೆಯನ್ನು ನ್ಯಾಯಾಲಯಕ್ಕೆ ಬರದಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆಕೆಗೆ ಕಾಲು ನೋವು, ಸೊಂಟ ನೋವು ಇಲ್ಲ ಎಂದರೆ ಸರಿಯಲ್ಲ. ಆಕೆಗೆ ನ್ಯಾಯಾಲಯಕ್ಕೆ ಬರಲು ಸಾಧ್ಯವಾಗಿರದ ಕಾರಣ ಆಕೆ ನನ್ನ ಪರವಾಗಿ ನಿಪಿ.4 ರಂತೆ ಮೊಕ್ತ್ಯಾರುನಾಮೆ ಬರೆದುಕೊಟ್ಟಿದ್ದಾಳೆ. ಸದರಿ ನಿಪಿ.4 ರ ಆಧಾರದಲ್ಲಿ ನಾನೇ ನಮ್ಮ ವಕೀಲರಿಗೆ ದಾವೆ ಸಲ್ಲಿಸಲು ಮತ್ತು ನಡೆಸಲು ಮಾಹಿತಿ ನೀಡುತ್ತಿದ್ದೇನೆ. ನಿಪಿ.4 ನ್ನು 2019 ರಲ್ಲಿ ಬರೆದುಕೊಟ್ಟಿದ್ದಾಳೆ, ತಿಂಗಳು ನೆನಪಿಲ್ಲ. ಉಡುಪಿಯಲ್ಲಿ ಸದರಿ ದಾಖಲೆ ಬರೆದುಕೊಟ್ಟಿದ್ದಾಳೆ. ಸದರಿ ಸಮಯ ಆಕೆಯ ಆರೋಗ್ಯ ಚೆನ್ನಾಗಿತ್ತಾ ಎಂದರೆ ಸಾಕ್ಷಿ, ಚೆನ್ನಾಗಿರಲಿಲ್ಲ, ಆದರೆ ಊರಿನ ರಥೋತ್ಸವಕ್ಕೆ ಬಂದಾಗ ಆಕೆ ನನ್ನ ಪರವಾಗಿ ನಿಪಿ.4 ಬರೆದುಕೊಟ್ಟಿದ್ದಳು ಎನ್ನುತ್ತಾರೆ.

2. ನನ್ನ ಹೆಂಡತಿ ಹೆಸರಿನಲ್ಲಿ 1 ನೇ ಪ್ರತಿವಾದಿ ಫೋರ್ಜರಿ ಜಿ.ಪಿ.ಎ ಮಾಡಿದ ಕಾರಣ ನಾನು ಈ ದಾವೆ ಸಲ್ಲಿಸಿದ್ದೇನೆ. 2019 ರಲ್ಲಿ ಸದರಿ ಫೋರ್ಜರಿ ಆದ ಬಗ್ಗೆ ತಿಳಿಯಿತು. ನಿಪಿ.4 ರ ಒಂದು ತಿಂಗಳ ಮೊದಲು ಸದರಿ ಫೋರ್ಜರಿ ಬಗ್ಗೆ ತಿಳಿಯಿತು. ಸದರಿ ಫೋರ್ಜರಿ ಜಿ.ಪಿ.ಎ.,ಯನ್ನು ನಾನು ನೋಡಿರುವುದಿಲ್ಲ.

3. ನನ್ನ ಹೆಂಡತಿ ಮುಂಬೈಯಲ್ಲೇ ಹುಟ್ಟಿ ಬೆಳೆದಿರುತ್ತಾಳೆ. ಈ ಬಗ್ಗೆ ದಾಖಲೆ ಇದೆ. ಇನ್ನಾ ಊರಿನಲ್ಲಿ ಆಕೆಯ ತಾಯಿ ಮನೆ ಇದೆ. ನನ್ನ ಹೆಂಡತಿ ಇನ್ನಾದಲ್ಲಿ ಹುಟ್ಟಿ ಬೆಳೆದಿದ್ದರೂ ಜಿ.ಪಿ.ಎ ಫೋರ್ಜರಿ ಎಂದು ಸಾಧಿಸಲು ನಾನು ಆಕೆ ಮುಂಬೈಯಲ್ಲಿ ಹುಟ್ಟಿ ಬೆಳೆದಿದ್ದಾಳೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಫೋರ್ಜರಿ ಜಿ.ಪಿ.ಎ.,ಯನ್ನು ಕೇಸು ದಾಖಲು ಮಾಡಿದ ನಂತರ ನಮ್ಮ ವಕೀಲರು ಅವರ ಕಛೇರಿಯಲ್ಲಿ ತೋರಿಸಿರುತ್ತಾರೆ. ನನ್ನ ವಕೀಲರು

ಸದರಿ ದಾಖಲಾತಿಯ ಪ್ರತಿಯನ್ನು ತೆಗೆದು ತೋರಿಸಿರುತ್ತಾರೆ. ನನ್ನ ವಕೀಲರು ಎಲ್ಲಿಂದ ಸದರಿ ದಾಖಲೆಯ ಪ್ರತಿಯನ್ನು ತೆಗೆಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರು ಸರಕಾರಿ ಕಛೇರಿಯಿಂದ ಸದರಿ ದಾಖಲೆಯ ಪ್ರತಿ ಪಡೆದುಕೊಂಡಿರುತ್ತಾರೆ. ಸದರಿ ಫೋರ್ಜರಿ ಜಿ.ಪಿ.ಎ.,ಯ ಪ್ರತಿಯನ್ನು ನ್ಯಾಯಾಲಯಕ್ಕೆ ವಕೀಲರು ಹಾಜರುಪಡಿಸಿರಬೇಕು.

4. ನಾನು ಐದನೇ ತರಗತಿ ತನಕ ಊರಿನಲ್ಲೇ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ವಕೀಲರು ನನಗೆ ತೋರಿಸಿದ ಫೋರ್ಜರಿ ಜಿ.ಪಿ.ಎ., ಕನ್ನಡ ಭಾಷೆಯಲ್ಲಿ ಬರೆದಿರಬೇಕು, ಸರಿಯಾಗಿ ಗೊತ್ತಿಲ್ಲ. ಅದನ್ನು ನಮ್ಮ ವಕೀಲರು ನನಗೆ ಓದಿ ಹೇಳಿರುತ್ತಾರೆ. ಸಾಕ್ಷಿ, ನನಗೆ ತುಂಬಾ ನೆನಪಿನ ಶಕ್ತಿ ಇಲ್ಲ ಎನ್ನುತ್ತಾರೆ. ಸದರಿ ಜಿ.ಪಿ.ಎ ಫೋರ್ಜರಿ ಹೌದೋ, ಅಲ್ಲವಾ ಎಂದು ಹೇಳುವಷ್ಟು ನೆನಪಿನ ಶಕ್ತಿ ಇದೆ. ಸದರಿ ಜಿ.ಪಿ.ಎ.,ಯಲ್ಲಿ ಏನು ಫೋರ್ಜರಿ ಆಗಿದೆ ಎಂದರೆ ಸಾಕ್ಷಿ, ನನ್ನ ಹೆಂಡತಿ ನಿಪಿ.4 ಹೊರತುಪಡಿಸಿ ಬೇರೆ ಯಾರಿಗೂ ಜಿ.ಪಿ.ಎ ಬರೆದುಕೊಟ್ಟಿಲ್ಲ ಎನ್ನುತ್ತಾರೆ. ಸಾಕ್ಷಿ, 1 ನೇ ಪ್ರತಿವಾದಿಯ ಬಗ್ಗೆ ನನ್ನ ಹೆಂಡತಿಗೆ ಪರಿಚಯವೇ ಇಲ್ಲದ ಕಾರಣ ಸದರಿ ದಾಖಲೆ ಫೋರ್ಜರಿ ಜಿ.ಪಿ.ಎ., ಎನ್ನುತ್ತೇನೆ. ಸದರಿ ದಾಖಲೆಯಲ್ಲಿ ಬರೆದ ಎಲ್ಲಾ ವಿಷಯಗಳು ಫೋರ್ಜರಿ ಇರುತ್ತದೆ.

5. ನಿಪಿ.4 ರಲ್ಲಿ ಸದರಿ ಫೋರ್ಜರಿ ದಾಖಲಾತಿಯ ಬಗ್ಗೆ ವ್ಯಾಜ್ಯ ಹೂಡುವಂತೆ ನಮೂದಿಸಿದ್ದಾರಾ ಎಂದರೆ ಹೌದು. ನನಗೆ ಸದರಿ ಫೋರ್ಜರಿ ಆಗಿರುವ ಬಗ್ಗೆ ದಾವೆ ಸಲ್ಲಿಸುವ ಒಂದು ತಿಂಗಳ ಮೊದಲು ಗೊತ್ತಾಯಿತು. ನಾನು ಫೋರ್ಜರಿ ದಾಖಲೆ ಮಾಡಿದ ಬಗ್ಗೆ ಪ್ರತಿವಾದಿಯರ ವಿರುದ್ಧ ಯಾವುದೇ ಪೊಲೀಸ್ ದೂರು ನೀಡಿಲ್ಲ. ನಮಗೆ ಇಬ್ಬರೂ ಪ್ರತಿವಾದಿಯ ಒಟ್ಟಾಗಿ ಮೋಸ ಮಾಡಿದ್ದಾರೆ.

6. ನನಗೆ 2014 ರಲ್ಲಿ 1 ನೇ ಪ್ರತಿವಾದಿಯ ಪರಿಚಯ ಆಗಿರುತ್ತದೆ, ನನ್ನ ಹೆಂಡತಿಗೆ ಪರಿಚಯ ಆಗಿಲ್ಲ. ದಾವಾ ಆಸ್ತಿಯನ್ನು ಭೂ ಪರಿವರ್ತನೆ ಮಾಡಲು ನಾನು ರೂಪಾಯಿ ಐವತ್ತು ಸಾವಿರವನ್ನು 1 ನೇ ಪ್ರತಿವಾದಿಗೆ ನೀಡಿದ್ದು, ಸದರಿ ಸಮಯ ನನಗೆ ಆಕೆಯ ಪರಿಚಯ

ಆಗಿರುತ್ತದೆ. ನನ್ನ ಹೆಂಡತಿಗೆ 1 ನೇ ಪ್ರತಿವಾದಿಯ ಪರಿಚಯ 2017-18 ರಲ್ಲಿ ಆಗಿರುತ್ತದೆ. 2 ನೇ ಪ್ರತಿವಾದಿಯ ಪರಿಚಯ ನನ್ನ ಹೆಂಡತಿಗೆ ಇಲ್ಲಿಯವರೆಗೆ ಇರುವುದಿಲ್ಲ. ನನಗೆ 2019 ರಲ್ಲಿ 2 ನೇ ಪ್ರತಿವಾದಿಯ ಪರಿಚಯ ಆಗಿರುತ್ತದೆ. ನನಗೆ 1 ನೇ ಪ್ರತಿವಾದಿಯೇ 2 ನೇ ಪ್ರತಿವಾದಿಯ ಪರಿಚಯ ಮಾಡಿಕೊಟ್ಟಿದ್ದಳು. ಭೂ ಪರಿವರ್ತನೆ ಮಾಡಿಸಿಕೊಡುವುದಾಗಿ 1 ನೇ ಪ್ರತಿವಾದಿ ಮಾತ್ರ ನನಗೆ ಹೇಳಿದ್ದಳು. ನನಗೆ ಸದರಿ ಭೂ ಪರಿವರ್ತನೆಗಾಗಿ ಹೋಗುತ್ತಿದ್ದಾಗ ಪಾಂಗಳದಲ್ಲಿ 2 ನೇ ಪ್ರತಿವಾದಿಯ ಪರಿಚಯ ಆಗಿರುತ್ತದೆ. ಆ ನಂತರ ನಾನು ಸದರಿ 2 ನೇ ಪ್ರತಿವಾದಿಯನ್ನು ಯಾವತ್ತೂ ಭೇಟಿ ಮಾಡಿಲ್ಲ.

7. ದಾವಾ ಆಸ್ತಿಯನ್ನು ನಾನು ನನ್ನ ಹೆಂಡತಿಯ ಹೆಸರಿನಲ್ಲಿ ಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಆಸ್ತಿಯ ಮೂಲ ಕ್ರಯ ಪತ್ರಗಳು ನನ್ನ ಮನೆಯಲ್ಲಿ ಇದೆ. ಭೂ ಪರಿವರ್ತನೆಗಾಗಿ ನಾನು 1 ನೇ ಪ್ರತಿವಾದಿಗೆ 50/- ಮೌಲ್ಯದ 03 ಛಾಪಾ ಕಾಗದ, 20 ಮೌಲ್ಯದ 03 ಛಾಪಾ ಕಾಗದ ಹಾಗೂ 10/- ಮೌಲ್ಯದ 02 ಛಾಪಾ ಕಾಗದಗಳನ್ನು ನೀಡಿದ್ದೆನು. ಸದರಿ ಎಲ್ಲಾ ಛಾಪಾ ಕಾಗದಗಳು ಮುಂಬೈಯದ್ದಾಗಿತ್ತು. ಅದಲ್ಲದೇ ಸುರತ್ಕಲ್ ಹಾಗೂ ದಾವಾ ಆಸ್ತಿಗೆ ಸಂಬಂದಪಟ್ಟ ದಾಖಲೆಗಳನ್ನು ಕೂಡ ಆಕೆಗೆ ನೀಡಿದ್ದೆನು. ಸದರಿ ದಾಖಲಾತಿಗಳನ್ನು ನನ್ನ ಹೆಂಡತಿ 1 ನೇ ಪ್ರತಿವಾದಿಗೆ ನೀಡಿರುವುದಿಲ್ಲ, ನಾನೇ ನೀಡಿದ್ದೇನೆ. 1 ನೇ ಪ್ರತಿವಾದಿ ಖಾಲಿ ಹಾಳೆಗೆ ಭೂ ಪರಿವರ್ತನೆ ಅರ್ಜಿಗೋಸ್ಕರ ನನ್ನ ಹೆಂಡತಿಯ ಸಹಿ ಪಡೆದುಕೊಂಡಿದ್ದಳು. ಸದರಿ ಸಹಿ ಬಿಟ್ಟರೆ ಬೇರೆ ಎಲ್ಲೂ ಕೂಡ ನನ್ನ ಹೆಂಡತಿ ಸಹಿಯನ್ನು ಮಾಡಿಲ್ಲ. ಸದರಿ ಭೂ ಪರಿವರ್ತನೆ ಅರ್ಜಿಗೆ ನನ್ನ ಹೆಂಡತಿ ಬನ್ನಂಜೆಯಲ್ಲಿನ ತನ್ನ ಚಿಕ್ಕಪ್ಪನ ಮನೆಯಲ್ಲಿ ಸಹಿ ಮಾಡಿದ್ದಳು. ನನ್ನ ಹೆಂಡತಿ ಸಹಿ ಮಾಡಿಟ್ಟಿದ್ದ ಅರ್ಜಿಯನ್ನು 1 ನೇ ಪ್ರತಿವಾದಿ ಸದರಿ ಬನ್ನಂಜೆಯ ಮನೆಗೆ ಬಂದು ತೆಗೆದುಕೊಂಡು ಹೋಗಿದ್ದಳು.

8. ನಾನು ಸಾಧಿಸುವ ಫೋರ್ಜರಿ ಜಿ.ಪಿ.ಎ.,ಯನ್ನು ಯಾರು ನೋಟರಿ ಮಾಡಿದ್ದಾರೆ ಎಂದು ನಾನು ಗಮನಿಸಿಲ್ಲ. ನಾನು ಮಂಗಳೂರಿನ ತಾಳಿಪ್ಪಾಡಿಯಲ್ಲಿ ಸುಮಾರು 20 ಎಕರೆ ಆಸ್ತಿಯನ್ನು ಜಯರಾಮ ಶೆಟ್ಟಿಯವರಿಂದ ರೂಪಾಯಿ ಎಂಬತ್ತು ಲಕ್ಷಕ್ಕೆ ಖರೀದಿ ಮಾಡಿದ್ದೇನೆ

ಎಂದರೆ ಸರಿ. ಸದರಿ ಜಯರಾಮ ಶೆಟ್ಟಿ ನನಗೆ ಸದರಿ ಆಸ್ತಿಗೆ ಸಂಬಂದಿಸಿದಂತೆ ದಿನಾಂಕ 22-07-1998 ರಂದು ಮೊಕ್ತ್ಯಾರುನಾಮೆ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಅಸ್ತಿಯನ್ನು ಖರೀದಿ ಮಾಡಲು ನಿಮಗೆ ದುಡ್ಡಿನ ಕೊರತೆ ಆದ ಕಾರಣ ದಾವಾ ಆಸ್ತಿಯನ್ನು ನನ್ನ ಹೆಂಡತಿಯ ಮೂಲಕ ಮಾರಾಟ ಮಾಡಿ 2 ನೇ ಪ್ರತಿವಾದಿಯಿಂದ ಹಣ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ತಾಳಿಪ್ವಾಡಿ ಆಸ್ತಿಯನ್ನು ಖರೀದಿ ಮಾಡುವ ಸಂಬಂದ ದಾವಾ ಆಸ್ತಿಯನ್ನು ಮಾರಾಟ ಮಾಡುವರೇ ನನ್ನ ಹೆಂಡತಿ ಹಾಗೂ 2 ನೇ ಪ್ರತಿವಾದಿ ನಡುವೆ ಒಪ್ಪಂದ ಆಗಿತ್ತು ಎಂದರೆ ಸರಿಯಲ್ಲ. ಹಾಗಾಗಿ ಮಾರಾಟಕ್ಕೋಸ್ಕರ ನನ್ನ ಹೆಂಡಂತಿ 1 ನೇ ಪ್ರತಿವಾದಿಗೆ ಜಿ.ಪಿ.ಎ ಬರೆದುಕೊಟ್ಟಿದ್ದಳು ಎಂದರೆ ಸರಿಯಲ್ಲ. ಸದರಿ ಕಾನೂನು ಪ್ರಕಾರ ನೀಡಿದ್ದ ಜಿ.ಪಿ.ಎ.,ಯನ್ನು ನಾನು ಫೋರ್ಜರಿ ಎಂದು ಸುಳ್ಳಾಗಿ ಸಾಧಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಜಯರಾಮ ಶೆಟ್ಟಿ ನನ್ನ ಪರವಾಗಿ ನೀಡಿದ್ದ ಜಿ.ಪಿ.ಎ ಯನ್ನು ನೋಟರಿ ವಕೀಲರಾದ ಉಡುಪಿಯ ಶ್ರೀಧರ ಕಲ್ಮಾಡಿ ಇವರು ನೋಟರಿ ಮಾಡಿದ್ದಾರೆ ಎಂದರೆ ಸರಿ. ಸದರಿ ನೋಟರಿ ಮಾಡಿದ ದಿನವೇ ಸದರಿ ಶ್ರೀಧರ ಕಲ್ಮಾಡಿಯವರ ಮೂಲಕ 1 ನೇ ಪ್ರತಿವಾದಿ ಹೆಸರಿಗೆ ವಾದಿ ಜಿ.ಪಿ.ಎ ಬರೆದುಕೊಟ್ಟಿದ್ದಾಳೆ ಎಂದರೆ ಸರಿಯಲ್ಲ.

9. ನಾನು 2014 ರಲ್ಲಿ ಎಲ್ಲಾ ದಾಖಲೆಗಳನ್ನು ಒದಗಿಸಿದ್ದರೂ 1 ನೇ ಪ್ರತಿವಾದಿ ಇಲ್ಲಿಯ ತನಕ ದಾವಾ ಆಸ್ತಿಯ ಭೂ ಪರಿವರ್ತನೆ ಮಾಡಿಸಿರುವುದಿಲ್ಲ. ನನಗೆ 1 ನೇ ಪ್ರತಿವಾದಿಯನ್ನು ಕಟಪಾಡಿಯ ಪೆಟ್ರೋಲ್ ಬಂಕಿನವರು ಪರಿಚಯ ಮಾಡಿಕೊಟ್ಟಿದ್ದರು. ನಾನು ನೀಡಿದ್ದ ದಾಖಲೆಗಳನ್ನು ವಾಪಾಸು ನೀಡುವಂತೆ 1 ನೇ ಪ್ರತಿವಾದಿಯ ಬಳಿ ಕೇಳುತ್ತಾ ಬಂದಿರುತ್ತೇನೆ. ಆಕೆ ಲಾಕರ್‌ನಲ್ಲಿ ಇದೆ ಎಂದು ನೆಪ ಹೇಳಿ ಮುಂದೂಡುತ್ತಿದ್ದಾಳೆ. ನೀವು ಆಕೆಗೆ ವಕೀಲರ ಮೂಲಕ ನೋಟೀಸು ಕಳುಹಿಸಿದ್ದೀರಾ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನಾನು ಭೂ ಪರಿವರ್ತನೆಗೆ ನೀಡಿದ್ದ ಹಣವನ್ನು ಹಾಗೂ ದಾಖಲೆಯನ್ನು ವಾಪಾಸು ನೀಡಿಲ್ಲ ಎಂದು ನಾನು ಪೊಲೀಸರ ಬಳಿ ಯಾವುದೇ ದೂರು ಸಲ್ಲಿಸಿಲ್ಲ. ವಕೀಲರ ಬಳಿ ಇದ್ದ ನಾನು ಫೋರ್ಜರಿ ಎಂದು ಸಾಧಿಸುವ ಜಿ.ಪಿ.ಎ.,ಯನ್ನು ನನ್ನ ಹೆಂಡತಿ ಊರಿಗೆ ಬಂದಾಗ ವಕೀಲರ ಕಛೇರಿಯಲ್ಲಿ ತೋರಿಸಿರುತ್ತೇನೆ. ಅಂದರೆ ನಿಪಿ.4 ಕ್ಕೆ ಸಹಿ ಮಾಡುವ ಸಮಯ ಆಕೆಗೆ ಸದರಿ ಫೋರ್ಜರಿ ಜಿ.ಪಿ.ಎ.,ಯನ್ನು

ತೋರಿಸಿರುತ್ತೇನೆ. ನನ್ನ ಹೆಂಡತಿ 2 ನೇ ಪ್ರತಿವಾದಿಯಿಂದ ದಾವಾ ಆಸ್ತಿಯ ಕುರಿತಾಗಿ ಸಂಪೂರ್ಣ ಖರೀದಿ ಮೊತ್ತವನ್ನು ಸ್ವೀಕರಿಸಿ 1 ನೇ ಪ್ರತಿವಾದಿಗೆ ಕ್ರಯ ಸಾಧನ ಬರೆದುಕೊಡುವಂತೆ ತಿಳಿಸಿ ಜಿ.ಪಿ.ಎ ಬರೆದುಕೊಟ್ಟಿದ್ದಳು ಎಂದರೆ ಸರಿಯಲ್ಲ. ನನಗೆ ಸದರಿ ಫೋರ್ಜರಿ ಜಿ.ಪಿ.ಎ.,ಯಲ್ಲಿನ ಸಾಕ್ಷಿದಾರರ ಹೆಸರು ಗೊತ್ತಿಲ್ಲ.

10. ಪ್ರಸ್ತುತ ದಾವೆ ಚಾಲ್ತಿಯಲ್ಲಿರುವ ವಿಷಯ ನನಗೆ ಹೆಂಡತಿಗೆ ಗೊತ್ತಿಲ್ಲ ಹಾಗೂ ಆಕೆಯ ಗಮನಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನಿಪಿ.4 ಮೊಕ್ತ್ಯಾರುನಾಮೆಗೆ ನನ್ನ ಹೆಂಡತಿ ಸಹಿ ಮಾಡಿಲ್ಲ, ಬದಲಿಗೆ ನಾನೇ ಆಕೆಯ ಸಹಿಯನ್ನು ಫೋರ್ಜರಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಗಮನಕ್ಕೆ ತಾರದೆ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.